**ವಿಶೇಷ ಮೊಕದ್ದಮೆ ಸಂಖ್ಯೆಃ133/2016**

**ಪಿ.ಡಬ್ಲ್ಯೂಃ11 (ಸಿಡಬ್ಲ್ಯೂಃ45 )**

**ಸಾಕ್ಷಿಯನ್ನು ದಿನಾಂಕ 11.8.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**47.** ದಿಃ20.2.2015 ರಂದು, 2 ನೇ ಆರೋಪಿಗೆ ಸಂಬಂಧಪಟ್ಟ ಸೇವಾ ದಾಖಲಾತಿಗಳನ್ನು ಕೋರಿ ಪ್ರಕರಣದ ಸಾಕ್ಷಿ ಚಾಸಾ.15 ರವರಿಗೆ ಮನವಿ ಮಾಡಿದ್ದೆನು. ನನ್ನ ಮನವಿ ಮೇರೆಗೆ ಚಾಸಾ.15 ರವರು ದಿಃ25.2.2015 ರಂದು 2 ನೇ ಆರೋಪಿಗೆ ಸಂಬಂಧಪಟ್ಟ ಸೇವಾ ದಾಖಲಾತಿಗಳನ್ನು ನನಗೆ ನೀಡಿರುತ್ತಾರೆ. ಈ ಬಗ್ಗೆ ಈಗ ನನಗೆ ತೋರಿಸಿದ ದಾಖಲಾತಿಗಳು ಚಾಸಾ.15 ರವರ ಪತ್ರ ಮತ್ತು 2 ನೇ ಆರೋಪಿಗೆ ಸಂಬಂಧಪಟ್ಟ ಸೇವಾ ವಿವರಗಳನ್ನು ಒಳಗೊಂಡ ದಾಖಲಾತಿಗಳು ಆಗಿದ್ದು ಅವುಗಳನ್ನು ಈಗಾಗಲೇ ಒಟ್ಟಾರೆ ನಿಪಿ.71 ಎಂದು ಗುರುತು ಮಾಡಲಾಗಿದೆ. ನಿಪಿ.71 ರಲ್ಲಿರುವ ನನ್ನ ಸ್ವೀಕೃತಿ ರುಜು ಹಿಂಬರಹವನ್ನು **ನಿಪಿ.71(ಬಿ)** ಈಗ ಎಂದು ಗುರುತು ಮಾಡಲಾಯಿತು.

**48.** ದಿಃ3.3.2015 ರಂದು ಚಾಸಾ.3 ರವರು ಚಾಸಾ.18 ರವರೊಂದಿಗೆ ಸಹಕರಿಸಿ ಕೃತ್ಯ ಸ್ಥಳವನ್ನು ಪರಿಶೀಲಿಸಿ, ಕೃತ್ಯ ಸ್ಥಳದ ನಕಾಶೆ ನೀಡಲು ಕೋರಿದ ಮೇರೆಗೆ ಚಾಸಾ.18 ರವರು ನನ್ನ ಕೋರಿಕೆಯನ್ನು ಪುರಸ್ಕರಿಸಿ ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸಿ ದಿಃ22.4.2015 ರಂದು ನನಗೆ ನೀಡಿರುತ್ತಾರೆ.ಈಗ ನನಗೆ ತೋರಿಸಿದ ದಾಖಲಾತಿಯು ಚಾಸಾ.18 ರವರ ಪತ್ರ ಮತ್ತು ನಾನು ಕೋರಿ ಸ್ವೀಕರಿಸಿದ ದಾಖಲೆಗಳಾಗಿರುತ್ತವೆ. ಅವುಗಳನ್ನು ಈಗಾಗಲೆ ನಿಪಿ.56 ಎಂದು ಗುರುತು ಮಾಡಿದ್ದು ನಿಪಿ.56 ರಲ್ಲಿ ನನ್ನ ಸ್ವೀಕೃತಿ ರುಜುವನ್ನು ಈಗ **ನಿಪಿ.56(ಬಿ)** ಎಂದು ಗುರುತು ಮಾಡಲಾಯಿತು.

**49**. ದಿಃ13.4.2015 ರಂದು ಪ್ರಕರಣದ ಸಾಕ್ಷಿ ಚಾಸಾ.15 ರವರಿಗೆ ನಾನು ಪತ್ರ ಬರೆದು 2 ನೇ ಆರೋಪಿ ಸ್ಥಿರಾಸ್ತಿ ಸ್ವತ್ತುಗಳ ಖಾತಾ ಬದಲಾವಣೆ ಕುರಿತಂತೆ ಅನುಸರಿಸಬೇಕಾದ ಕಾನೂನು ನಿಯಮಗಳ ಬಗ್ಗೆ ಹಾಗೂ ಪ್ರಕರಣ ಸಾಕ್ಷಿ ಚಾಸಾ.1 ರವರ ವಿವಾದಾಸ್ಪದ ಸ್ವತ್ತು ಕುರಿತಂತೆ 2 ನೇ ಆರೋಪಿ ನಮೂನೆ - 9 ಮತ್ತು 11 ನೇ ದಾಖಲಾತಿಗಳನ್ನು ನೀಡಬೇಕಾದರೆ ಸೂಕ್ತ ಕಾನೂನು ನಿಯಮಾವಳಿಗಳನ್ನು ಪಾಲಿಸಿರುವರೇ ಅಥವಾ ಇಲ್ಲವೇ ಎಂಬ ಬಗ್ಗೆ ಸಂಪೂರ್ಣ ವಿವರಣೆಯನ್ನು ಕೋರಿದ್ದೆನು. ನನ್ನ ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಚಾಸಾ.15 ರವರು ದಿಃ27.4.2015 ರಂದು ಪತ್ರವನ್ನು ಬರೆದಿದ್ದು ಅದರ ಜೊತೆಯಲ್ಲಿ ನಾನು 2 ನೇ ಆರೋಪಿಯ ಕರ್ತವ್ಯಗಳು ಕುರಿತಂತೆ ಕೋರಿದ್ದ ಮಾಹಿತಿಯನ್ನು ನೀಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳು ದೋಷಾರೋಪಣೆಯ ಪುಟ ಸಂಖ್ಯೆಃ 269 ರಿಂದ 280 ರ ಪುಟಗಳ ಭಾಗಗಳಾಗಿರುತ್ತವೆ. ಅವುಗಳನ್ನು ಈಗಾಗಲೇ ನಿಪಿ.72 ರ ಭಾಗಗಳಾಗಿ ಗುರುತು ಮಾಡಲಾಗಿದೆ. ಈ ಬಗ್ಗೆ ನನ್ನ ಸ್ವೀಕೃತಿ ಹಿಂಬರಹ ರುಜುವನ್ನು ಪುಟಸಂಖ್ಯೆ 269 ರಲ್ಲಿ **ನಿಪಿ.72(ಬಿ)** ಎಂದು ಈಗ ಗುರುತು ಮಾಡಲಾಯಿತು.

**50**. ದಿಃ13.4.2015 ರಂದು, ನಾನು ಚಾಸಾ.15 ರವರಿಗೆ ಮತ್ತೊಮ್ಮೆ ಪತ್ರದ ಮುಖೇನ ವ್ಯವಹರಿಸಿ ಪ್ರಕರಣದ ಆರೋಪಿ ಶುಲ್ಕ ರಸೀದಿ ಸಂಖ್ಯೆಃ 1242 ಮತ್ತು 1243 ಇವುಗಳ ಕುರಿತಂತೆ ಅಭಿವೃದ್ಧಿ ಶುಲ್ಕದ ಬಾಪ್ತು ರೂ.2000/- ಗಳನ್ನು ನಮೂದಿಸಿರುವ ಸಂಗತಿ ಸತ್ಯ ಸಂಗತಿಯೋ ಅಥವಾ ಅಲ್ಲವೋ ಎಂಬ ಬಗ್ಗೆ ಖಚಿತ ಮಾಹಿತಿಯನ್ನು ಕೋರಿದ್ದೆ. ನನ್ನ ಕೋರಿಕೆಗೆ ಅನುಗುಣವಾಗಿ ಚಾಸಾ.15 ರವರು ದಿಃ27.4.2015 ರಂದು ಲಿಖಿತ ಮಾಹಿತಿಯನ್ನು ನೀಡಿತ್ತಾ ರಸೀದಿ ಸಂಖ್ಯೆ 1242 ಮತ್ತು 1243 ರ ಅಡಿಯಲ್ಲಿ ಸಂಗ್ರಹಿಸಲಾಗಿರುವ ಶುಲ್ಕ ಅಭಿವೃದ್ಧಿ ಶುಲ್ಕ ಎಂದು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹ ಶುಲ್ಕ ಕಾನೂನು ಬಾಹಿರ

ಶುಲ್ಕ ಎಂಬುದಾಗಿ ವಿವರಿಸಿ ಮಾಹಿತಿ ನೀಡಿರುತ್ತಾರೆ. ಸದರಿ ಲಿಖಿತ ಮಾಹಿತಿಯನ್ನು ನಾನು ದೋಷಾರೋಪಣೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೂ ಸಹ ದೋಷಾರೋಪಣೆಯ ಪುಟ ಸಂಖ್ಯೆ 269 ರಿಂದ 280 ರವರೆವಿಗಿನ ಭಾಗವಾಗಿರುತ್ತದೆ. ಸದರಿ ಪುಟಗಳನ್ನು ಈಗಾಗಲೇ ಒಟ್ಟಾರೆ ನಿಪಿ.72 ಮತ್ತು 73 ಗಳಾಗಿ ಗುರುತು ಮಾಡಲಾಗಿರುತ್ತದೆ.

**51.** ದಿಃ13.4.2015 ರಂದು ಪ್ರಕರಣದ ಸಾಕ್ಷಿ ಚಾಸಾ.38 ರವರಿಗೆ ನಾನು ಪತ್ರದ ಮುಖೇನ ವ್ಯವಹರಿಸುತ್ತಾ, 2012 ರಿಂದ 2015 ರ ಇಸವಿಯ ವರೆವಿಗೂ ಹಲಕುಂದಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ಥಿರಾಸ್ತಿ ಸ್ವತ್ತುಗಳ ನಮೂನೆ -9 ಮತ್ತು 11 ಗಳನ್ನು ವಿತರಿಸಿದ ಬಗ್ಗೆ ಮಾಹಿತಿ ಮತ್ತು ಸದರಿ ಅವಧಿಯಲ್ಲಿ ಸಂಗ್ರಹಿಸಲಾಗಿದ್ದ ಅಭಿವೃದ್ಧಿ ಶುಲ್ಕದ ಬಗ್ಗೆ ಮಾಹಿತಿ ಕೇಳಿದೆ. ನನ್ನ ಸದರಿ ಕೋರಿಕೆಗೆ ಅನುಗುಣವಾಗಿ ಸದರಿ ಸಾಕ್ಷಿ ಚಾಸಾ.38 ರವರು ನನಗೆ ದಿಃ28.4.2015 ರಂದು ಟಪಾಲು ಮುಖೇನ ಮಾಹಿತಿ ನೀಡಿರುತ್ತಾರೆ. ನಾನು ಅದನ್ನು ಸ್ವೀಕರಿಸಿ ಪರಿಶೀಲಿಸಿದ್ದೇನೆ. 2012 ರಿಂದ 2015 ರ ವರೆವಿಗೂ ಸಾರ್ವಜನಿಕರ ವತಿಯಿಂದ ಖಾತಾ ಬದಲಾವಣೆ ಕುರಿತಂತೆ ರೂ.300/- ರಿಂದ ರೂ.500/- ದರದಂತೆ ಸರ್ಕಾರಿ ಶುಲ್ಕ ವಿಧಿಸಿರುವುದಾಗಿ ಹಾಗೂ ನಮೂನೆ -9 ಮತ್ತು 11 ಗಳನ್ನು ನೀಡಲು ತಲಾ ನಮೂನೆಗಳಿಗೆ ರೂ.50/-ಗಳ ದರದಂತೆ ಶುಲ್ಕವನ್ನು ವಿಧಿಸಿದ್ದರು ಎಂಬುದಾಗಿ ಮಾಹಿತಿ ನೀಡಿರುತ್ತಾರೆ ಮತ್ತು ಸದರಿ ಜವಾಬಿನಲ್ಲಿ ಯಾವುದೇ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಿಲ್ಲ ಎಂದು ವಿವರಿಸಿರುತ್ತಾರೆ. ಚಾಸಾ.38 ರವರು ತಮ್ಮ ಸದರಿ ವರದಿಯಲ್ಲಿ 2 ನೇ ಆರೋಪಿ ಪ್ರಕರಣದ ಸಾಕ್ಷಿ ಚಾಸಾ.1 ರವರಿಂದ ಅಭಿವೃದ್ಧಿ ಶುಲ್ಕ ರೂಪದಲ್ಲಿ ರೂ.2000/- ಗಳಿಗೆ ರಸೀದಿ ಬರೆದು ನಂತರ ರದ್ದುಪಡಿಸಿದ್ದಾರೆಂದು ತಮ್ಮ ಮಾಹಿತಿಯಲ್ಲಿ ಚಾಸಾ.38 ತಿಳಿಸಿದ್ದಾರೆ. ಚಾಸಾ.38 ರವರು ನೀಡಿದ್ದ ಸದರಿ ವರದಿಗಳನ್ನು ಈಗಾಗಲೇ ನಿಪಿ.80 ಮತ್ತು 81 ದಾಖಲೆಗಳಾಗಿ ಗುರುತು ಮಾಡಲಾಗಿದೆ.

**52.** ದಿಃ4.3.2015 ರಂದು, ನಾನು ಚಾಸಾ.39 ರವರೊಂದಿಗೆ ಪತ್ರವನ್ನು ವ್ಯವಹರಿಸಿ 2012 ರಿಂದ 2015 ರ ಅವಧಿಯಲ್ಲಿ ನಿರ್ವಹಿಸಿದ್ದ ಖಾತಾ ಬದಲಾವಣೆ ವಹಿ ಕುರಿತಂತೆ ಮತ್ತು ಕರವಸೂಲಿ ಪುಸ್ತಕಗಳನ್ನು ಹಲಕುಂದಿ ಗ್ರಾಮ ಪಂಚಾಯ್ತಿ ಕುರಿತಂತೆ ಮತ್ತು ಪ್ರಕರಣದ ಸಾಕ್ಷಿ ಚಾಸಾ.1 ರವರ ಸ್ವತ್ತಿಗೆ ಸಂಬಂಧಪಟ್ಟ ನಮೂನೆ -9 ಮತ್ತು 11 ಕುರಿತಂತೆ ಮಾಹಿತಿ ಕೇಳಿರುತ್ತೇನೆ. ನನ್ನ ಕೋರಿಕೆಗೆ ಅನುಗುಣವಾಗಿ ಚಾಸಾ.39 ರವರು ದಿಃ6.3.2015 ರಂದು ಟಪಾಲು ಮುಖೇನ ವಿವರಣೆ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಮಾಹಿತಿಯು ದೋಷಾರೋಪಣೆ ಪುಟಸಂಖ್ಯೆ 341 ರಿಂದ 534 ಇರುತ್ತದೆ. ಸದರಿ ದಾಖಲಾತಿಗಳನ್ನು ಈಗಾಗಲೇ ಒಟ್ಟಾರೆ ನಿಪಿ.79 ಎಂದು ಗುರುತು ಮಾಡಲಾಗಿದೆ. ನಿಪಿ.79 ರಲ್ಲಿ ನನ್ನ ಸ್ವೀಕೃತಿ ಬರಹವನ್ನು **ನಿಪಿ.79(ಎ)** ಎಂದು ಈಗ ಗುರುತು ಮಾಡಲಾಯಿತು.

**53.** ದಿಃ15.4.2015 ರಂದು ಪ್ರಕರಣದ ಸಾಕ್ಷಿ ಚಾಸಾ.20 ರವರು ರಾಯಚೂರು ರಾಸಾಯನಿಕ ತಜ್ಞರ ಕಚೇರಿಯಿಂದ ರಾಸಾಯನಿಕ ವಿಶ್ಲೇಷಣ ವರದಿಯನ್ನು ತಂದು ಹಾಜರುಪಡಿಸಿದರು. ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸದರಿ ವಿಶ್ಲೇಷಣಾ ವರದಿಯಲ್ಲಿ ವಸ್ತು ಸಂಖ್ಯೆ 5 ಮತ್ತು 6 ರಲ್ಲಿ ಪಿನಾಪ್ತಲಿನ್ ಅಂಶಗಳು ಇದ್ದ ಬಗ್ಗೆ ಖಚಿತ ವರದಿ ನೀಡಿರುತ್ತಾರೆ. ಸದರಿ ವರದಿ ಈಗ ನನಗೆ ತೋರಿಸಿದ ದಾಖಲಾತಿಯಾಗಿದ್ದು ಅದನ್ನು ಈಗಾಗಲೇ ನಿಪಿ.78 ಎಂದು ಗುರುತು ಮಾಡಲಾಗಿದೆ. ಸದರಿ ದಾಖಲೆಯಲ್ಲಿನ ನನ್ನ ಸ್ವೀಕೃತಿ ರುಜುವನ್ನು **ನಿಪಿ.78(ಬಿ)** ಎಂದು ಈಗ ಗುರುತು ಮಾಡಲಾಯಿತು.

**54.** ದಿಃ28.9.2015 ರಂದು ನಾನು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ತನಿಖಾ ಕ್ರಮವನ್ನು ಪ್ರಕರಣದ ಅಧಿಕಾರಿ ಸಾಕ್ಷಿ ಚಾಸಾ.46 ರವರಿಗೆ ನೀಡಿದ್ದೇನೆ.

**55**. ಪ್ರಕರಣದ ಸಾಕ್ಷಿ ಚಾಸಾ.6 ಶಂಕರ ಮೂರ್ತಿ ಈಗ ನನಗೆ ತೋರಿಸಿದ ನಿಪಿ.68 ರ ರೀತಿಯಲ್ಲಿ ಹೇಳಿಕೆ ನೀಡಿರುತ್ತಾರೆ. ಪ್ರಕರಣದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ.

**56**. ಪ್ರಕರಣದ ಸಾಕ್ಷಿ ಚಾಸಾ.1 ರವರು ತಮ್ಮ ಪ್ರಥಮ ಮಾಹಿತಿ ದೂರಿನಲ್ಲಿ ರುಜುಗಳನ್ನು ಮಾಡಿದ್ದು, ಪ್ರಥಮ ಮಾಹಿತಿ ದೂರನ್ನು ಈಗಾಗಲೇ ನಿಪಿ.83 ಎಂದು ಗುರುತು ಮಾಡಲಾಗಿದ್ದು, ಸದರಿ ದಾಖಲೆಯಲ್ಲಿನ ಚಾಸಾ.1 ರವರ 2 ರುಜುಗಳನ್ನು **ನಿಪಿ.83(ಬಿ) ಮತ್ತು (ಸಿ)** ಗಳಾಗಿ ಈಗ ಗುರುತು ಮಾಡಲಾಯಿತು. ನಿಪಿ.83 ರ ತತ್ಸಂಬಂಧ ನಾನು ದಾಖಲಿಸಿದ ಪ್ರ.ವ.ವರದಿಯನ್ನು ಈಗಾಗಲೇ ನಿಪಿ.87 ಎಂದು ಗುರುತು ಮಾಡಲಾಗಿದ್ದು ಅದರಲ್ಲಿರುವ ಚಾಸಾ.1 ರವರ ರುಜುವನ್ನು ಈಗ ನನ್ನಿಂದ **ನಿಪಿ.87(ಬಿ)** ಎಂದು ಗುರುತು ಮಾಡಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರಃ ವಕೀಲರು ಪಾಟಿ ಸವಾಲಿಗೆ ಸಮಾಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**